ಎಂವಿಸಿ ನಂ. 434/2022

ಪಿ ಡಬ್ಲ್ಯೂ 01

**ದಿನಾಂಕಃ 16-01-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ 04 ನೇ ಎದುರುದಾರರ ಪರ ವಕೀಲರಿಂದಃ**

1. ನಾನು ರಾಣೇಬೆನ್ನೂರಿನಲ್ಲಿ ಖಾಯಂ ಆಗಿ ವಾಸವಾಗಿಲ್ಲ ಎಂದರೆ ನಿಜ. ನಾನು ಹತ್ತನೇ ತರಗತಿವರೆಗೆ ಓದಿದ್ದೇನೆ. ಈಗ ನನಗೆ 44 ರಿಂದ 45 ವರ್ಷ ಎನ್ನುವುದು ಸರಿಯಲ್ಲ. ನನಗೆ ಈಗ 43 ವರ್ಷ ವಯಸ್ಸು. ನಾನು ಮೊದಲು ಟ್ರಾಕ್ಟ್ ರ್ ಶೋರೂಮ್ನಲ್ಲಿ ಸೇಲ್ಸ್ ಮ್ಯಾನ್ ಎಂದು ಕೆಲಸ ಮಾಡುತ್ತಿದ್ದೆ. ಅದರ ಕುರಿತು ದಾಖಲೆ ಹಾಜರುಪಡಿಸಿಲ್ಲ. ನಾನು ಮಾಸಿಕ 30,000/-ರೂಪಾಯಿ ಸಂಬಳ ಪಡೆಯುತ್ತಿದ್ದೆ. ನನ್ನ ಸಂಬಳದ ಕುರಿತು ದಾಖಲೆ ಹಾಜರುಪಡಿಸಿಲ್ಲ. ಮಾಸಿಕ 30,000/-ರೂಪಾಯಿ ಸಂಬಳ ಪಡೆಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮೋಟಾರ್ ಸೈಕಲ್ ನಂಃ ಕೆಎ 14 ಇಎಲ್ 8167 ಇದು ಕಂಪನಿಯ ವಾಹನವಾಗಿತ್ತು. ಅಪಘಾತದ ದಿನದಂದು ಸದರಿ ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ಸದರಿ ಪಾಲಿಸಿಯನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಅಪಘಾತವು 03 ವರ್ಷಗಳ ಹಿಂದೆ ಆಗಿದೆ. ದೂರನ್ನು ನಾನೇ ನೀಡಿದ್ದೇನೆ. ಅಪಘಾತದ ಮರುದಿನ ಪೋಲೀಸರು ಆಸ್ಪತ್ರೆಗೆ ಬಂದು ದೂರು ಪಡೆದುಕೊಂಡಿದ್ದಾರೆ. ದೂರು ನೀಡಲು ಏಕೆ ವಿಳಂಬವಾಗಿದೆ ಎಂದರೆ ಸಾಕ್ಷಿಯು ತನಗೆ ಮಾತನಾಡಲು ಆಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ನಾನೇ ವಾಹನದಿಂದ ಬಿದ್ದು ಅಪಘಾತ ಪಡೆಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾಹನಕ್ಕೆ ವಿಮೆ ಇಲ್ಲದೇ ಇರುವುದರಿಂದ, ಪರಿಹಾರ ಧನ ಪಡೆಯುವುದಕ್ಕಾಗಿ ಟ್ರಾಕ್ಟ್ ರ್ ಮತ್ತು ಟ್ರೈಲರ್ ಚಾಲಕನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಟ್ರಾಕ್ಟ್ ರ್ ಮತ್ತು ಟ್ರೈಲರ್ ನನ್ನ ವಾಹನಕ್ಕೆ ಯಾವುದೇ

ರೀತಿಯಿಂದ ಡಿಕ್ಕಿ ಹೊಡೆದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಬರೆದಿರುವ ವಿಷಯಗಳನ್ನು ತಿಳಿದುಕೊಂಡಿದ್ದೇನೆ. ಟ್ರೈಲರ್ ನ ಹಿಂದಿನ ಬಲ ಭಾಗದ ಗಾಲಿ ನನ್ನ ಮೋಟಾರ್ ಸೈಕಲ್ ಗೆ ತಾಗಿತ್ತು ಎಂದು ದೂರಿನಲ್ಲಿ ಬರೆಯಲಾಗಿದೆ ಎಂದರೆ ನಿಜ. ಸದರಿ ವಿಷಯವನ್ನು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಯಿಸಿಲ್ಲ ಎಂದರೆ ಸರಿಯಲ್ಲ. ಟ್ರ್ಯಾಕ್ಟ್ ರ್ ವಾಹನವು ನನ್ನ ಮೋಟಾರ್ ಸೈಕಲ್ ಗೆ ಹಿಂದಿನಿಂದ ಡಿಕ್ಕಿ ಹೊಡೆದು ಅಪಘಾತ ಮಾಡಿರುತ್ತದೆ ಎಂದು ನನ್ನ ಸಾಕ್ಷಿ ಪ್ರಮಾಣ ಪತ್ರದ 03 ನೇ ಪ್ಯಾರಾದಲ್ಲಿ ಬರೆಸಿರುವ ವಿಷಯ ಸತ್ಯವಾಗಿರುತ್ತದೆ. ಅಪಘಾತವು ಟ್ರ್ಯಾಕ್ಟ್ ರ್ ಚಾಲಕನ ತಪ್ಪಿನಿಂದ ಆಗಿಲ್ಲ ಎಂದರೆ ಸರಿಯಲ್ಲ. ನಾನು ಟ್ರ್ಯಾಕ್ಟ್ ರ್ ಚಾಲಕನ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ನಂತರ ನಾನು ಮೇಘಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದೇನೆ. ಅಪಘಾತದಿಂದ ನನ್ನ ಎಡಗಾಲ ಮೂಳೆ ಮುರಿತ ಆಗಿತ್ತು. ನನ್ನ ಕಾಲಿಗೆ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ನಾನು ಆಸ್ಪತ್ರೆಯಲ್ಲಿ 02 ತಿಂಗಳವರೆಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನನ್ನ ಕಾಲಿನ ಎಕ್ಸ್ ರೇ ತೆಗೆಸಿರುತ್ತಾರೆ. ಅದರ ಕುರಿತು ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಸಂಪೂರ್ಣವಾಗಿ ಗುಣಮುಖನಾದ ನಂತರ ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಆ ನಂತರ ನಾನು ವಾರಕ್ಕೆ 02 ಬಾರಿಯಂತೆ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇನೆ. ನಾನು ಶಿವಮೊಗ್ಗದ ನಾರಾಯಣ್ ಹೃದಯಾಲಯದಲ್ಲಿ ಸಹ ಚಿಕಿತ್ಸೆ ಪಡೆದಿದ್ದೇನೆ. ಅದರ ಕುರಿತು ದಾಖಲೆ ಹಾಜರುಪಡಿಸಿದ್ದೇನೆ. ದಿನಾಂಕ 14.12.2021 ರಿಂದ 09.06.2023 ರವರೆಗೆ ಯಾವುದೇ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆ ನೀಡಿದ ವೈದ್ಯರು ನನಗೆ ಯಾವುದೇ ಅಂಗನ್ಯೂನ್ಯತೆ ಇಲ್ಲ ಎಂದು ಹೇಳಿದ್ದರಿಂದ ನಾನು ರಾಣೇಬೆನ್ನೂರಿನ ಶಕುಂತಲಾ ಆಸ್ಪತ್ರೆಯಲ್ಲಿ

ಅಂಗನ್ಯೂನ್ಯತಾ ಪ್ರಮಾಣ ಪತ್ರ ಪಡೆದುಕೊಂಡಿದ್ದೇನೆ ಎಂದರೆ ನಿಜ. ನಾನು ದಿನನಿತ್ಯದ ಎಲ್ಲಾ ಕೆಲಸಗಳನ್ನು ಮಾಡಲು ಸಮರ್ಥನಾಗಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ರೀತಿಯ ಮೂಳೆ ಮುರಿತ ಆಗದೇ ಇರುವುದು ನಿಪಿ 07 ಎಕ್ಸ್ ರೇ ಫಿಲಂ ನಲ್ಲಿ ಕಂಡುಬರುತ್ತದೆ ಎಂದರೆ ನಿಜ. ಅಂಗನ್ಯೂನ್ಯತೆಯ ಪ್ರಮಾಣವನ್ನು 43% ಎಂದು ವೈದ್ಯರು ನನ್ನ ಹೇಳಿಕೆಯ ಮೇರೆಗೆ ಬರೆದಿದ್ದಾರೆ ಎಂದರೆ ನಿಜ. 03 ನೇ ಎದುರುದಾರನು ವಿಮಾ ಷರತ್ತನ್ನು ಉಲ್ಲಂಘಿಸಿರುವುದರಿಂದ 04 ನೇ ಎದುರುದಾರರು ಪರಿಹಾರ ಧನ ನೀಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ಚಿಕಿತ್ಸೆಗಾಗಿ 02 ಲಕ್ಷ ರೂಪಾಯಿ ಖರ್ಚು ಮಾಡಿದ್ದೇನೆ ಎಂದು ತೋರಿಸಲು ದಾಖಲೆ ಹಾಜರುಪಡಿಸಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

sd/-

1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.